





ಈಡೇರಿದಂತಾಗುತ್ತದೆ. ನಮಗೆ ಬೇಕಾದ ದರ್ಜೆಯ ಕಾರನ್ನು ನಮ್ಮ ಬಜೆಟ್‌ಗೆ ಅನುಗುಣವಾಗಿ ಆಯ್ದುಕೊಳ್ಳಬಹುದು. ಸಂಚಾರ ನಿಯಮಗಳನ್ನು ಪಾಲಿಸುವ, ಶಿಸ್ತಿನ ಡ್ರೈವಿಂಗ್ ವಿಧಾನದ ಅರಿವಿರುವ, ಗುಡ್ಡಗಾಡಿನ ಕಿರುದಾರಿಯಲ್ಲಿ ವಾಹನ ಚಲಾಯಿಸಿರುವ ಅನುಭವ ಬೇಕಷ್ಟೆ.

ಇನ್ನೂ ಒಂದು ವ್ಯವಸ್ಥೆ ಈಗ ಹಲವೆಡೆ ಪ್ರಸಿದ್ಧಿಯಾಗುತ್ತಿದೆ. ಅದೇ 'ಸೆಲ್ಫ್ ರೈಡ್' ವಿಧಾನ. ಮೊದಲು ಇದು ಗೋವಾದಲ್ಲಿ ಮಾತ್ರ ಹೆಚ್ಚಾಗಿ ಕಂಡುಬರುತ್ತಿತ್ತು. ಈಗೀಗ ಹೆಚ್ಚಿನ ಪ್ರೇಕ್ಷಣೀಯ ಸ್ಥಳಗಳಲ್ಲಿ ಬಾಡಿಗೆ ಬೈಕ್‌ಗಳನ್ನು ಘಂಟೆಯಾಧಾರದಲ್ಲಿ ಅಥವಾ ನಿರ್ದಿಷ್ಟ ದಿನಕ್ಕೆ ನೀಡುತ್ತಾರೆ. ನಿಮ್ಮ ನೆಚ್ಚಿನ ತಾಣವನ್ನು ಬಸ್ಸೋ, ರೈಲೋ, ವಿಮಾನ ಮಾರ್ಗದಲ್ಲಿ ತಲುಪಿ, ಸುತ್ತಾಟಕ್ಕೆ ದ್ವಿಚಕ್ರ ವಾಹನ ಆಯ್ದುಕೊಳ್ಳುವುದು ಉತ್ತಮ ವಿಧಾನ. ನಮಗೆ ಬೇಕೆಂದಲ್ಲಿ ಹೋಗಬಹುದು. ಪಾರ್ಕಿಂಗ್ ಸುಲಭ. ಗೂಗಲ್ ನಕ್ಷೆಯಿಂದಾಗಿ ದಾರಿತಪ್ಪುವ ಪರಿಸ್ಥಿತಿ ಕಮ್ಮಿ. ತಪ್ಪಿದರೂ ಸ್ಥಳೀಯರ ಮೂಲಕ ಶೀಘ್ರವಾಗಿ ಸರಿ ದಾರಿ ಹಿಡಿಯಬಹುದು. ನಮಗೆ ಬೇಕೆಂಬಷ್ಟು ಸಮಯ ಒಂದೇ ಸ್ಥಳದಲ್ಲಿ ಇರಬಹುದು. ಊಟಿ ಇನ್ನಿತರ ಕಿರಿದಾದ ದಾರಿ ಇರುವ ಪಟ್ಟಣಗಳಿಗೆ ಈ ವ್ಯವಸ್ಥೆ ಸೂಕ್ತ.

## ಸ್ವಂತ ವಾಹನದಲ್ಲಿ ಪ್ರಯಾಣ

ಲಾಂಗ್ ಡ್ರೈವ್ ಅನುಭವ ಬೇಕಿರುವವರಿಗೆ, ತಮ್ಮ ವಾಹನದಲ್ಲೇ ಪ್ರವಾಸ ಹೋಗಬೇಕೆಂಬ ಬಯಕೆ ಇರುವವರಿಗೆ ಇದು ಸೂಕ್ತ. 3–4 ದಿನಕ್ಕಿಂತ ಹೆಚ್ಚಿನ ದಿನದ ಪ್ರವಾಸವಾಗಿದ್ದರೆ ಸಾಕಷ್ಟು ಪೂರ್ವ ತಯಾರಿ ಅಗತ್ಯ. ಇದರಲ್ಲಿ ಅನುಕೂಲ, ಅನನುಕೂಲ ಎರಡೂ ಇದೆ. ನಮ್ಮದೇ ವಾಹನ, ಯಾರ ಹಂಗಿಲ್ಲ, ಸಮಯದ ಅಭಾವವಿಲ್ಲ, ಲಗೇಜ್ ಜಾಸ್ತಿಯಾಯಿತು ಎಂಬ ಬವಣೆಯಿಲ್ಲ, ಬೇಕಾದಲ್ಲಿ ವಾಹನ ನಿಲ್ಲಿಸಬಹುದು. ಆದರೆ ದಾರಿ ಮಧ್ಯೆ ವಾಹನ ಕೆಟ್ಟರೆ ಏನು ಮಾಡುವುದು ಎಂಬ ಸಣ್ಣ ಆತಂಕ, ಟ್ರಾಫಿಕ್ ಕಿರಿಕಿರಿಯಲ್ಲಿ ವಾಹನ ಚಲಾಯಿಸುವ ಒತ್ತಡ, ಪಾರ್ಕಿಂಗ್ ಸಮಸ್ಯೆ, ಟೋಲು, ಹೀಗೆ ಕೆಲವೊಂದು ಅನನುಕೂಲತೆಗಳೂ ಇವೆ.

## ವಸತಿ, ಊಟೋಪಚಾರ

ಇದಕ್ಕಂತೂ ಹಲವಾರು ಮಾರ್ಗೋಪಾಯಗಳು ಇವೆ. ಹೋಂ ಸ್ಟೇ, ರೆಸಾರ್ಟ್, ನಾವೇ ಅಡುಗೆ ಮಾಡಿಕೊಳ್ಳಲು ವ್ಯವಸ್ಥೆಯಿರುವ